5. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :

ವಿಷಯ : ನೆರೆ ಹಾವಳಿ ಮತ್ತು ಬರಗಾಲದ ಬಗ್ಗೆ ಚರ್ಚೆ :

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : preliminary submission ಅಂದರೆ ನೇರವಾಗಿ ಮಾತನಾಡಬಹುದೇ? ಸರ್ಕಾರ ಏನು ಹೇಳುತ್ತದೆ?

(ಗೊಂದಲ)

ಇದನ್ನು ರೂಲ್ 60ರಡಿಯಲ್ಲಿ ತೆಗೆದುಕೊಳ್ಳುತ್ತೀರಾ? ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಿಯಮ 60ರ ಅಡಿಯಲ್ಲಿ ಚರ್ಚೆಗೆ ಒಪ್ಪಿಕೊಳ್ಳಿ. ಇದಕ್ಕೆ ತಕರಾರು ಏಕೆ?

ಮಾನ್ಯ ಅಧ್ಯಕ್ಷರೆ, ಕರ್ನಾಟಕದ ಜನರ ಪಾಲಿಗೆ 2009–10 ನೇ ವರ್ಷ ಬಹಳ ಕೆಟ್ಟ ವರ್ಷವೆಂದು ನನಗನಿಸುತ್ತದೆ. ಈ ವರ್ಷ ಪ್ರಾರಂಭವಾದ ಮೇಲೆ ಏಪ್ರಿಲ್‌ನಿಂದ ಇಲ್ಲಿಯವರೆಗೆ ರಾಜ್ಯದ ಎಲ್ಲಾ ಭಾಗಗಳಲ್ಲಿ 6 ಕೋಟಿ ಜನರು ಬರಗಾಲದಿಂದ ಅಥವಾ ಪ್ರವಾಹದಿಂದ, ದೊಡ್ಡ ಅತಿವೃಷ್ಟಿಯಿಂದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಜನರು ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ. ಜುಲೈ ತಿಂಗಳಿನಲ್ಲಿ ಪ್ರವಾಹ ಬಂತು. ಆಗ ಕರಾವಳಿ ಜಿಲ್ಲೆಗಳು ಮತ್ತು ಮಲೆನಾಡು ಜಿಲ್ಲೆಗಳು 7 ಜಿಲ್ಲೆಗಳಲ್ಲಿ ಜುಲೈನಲ್ಲಿ ದೊಡ್ಡ ಪ್ರವಾಹ ಬಂತು. ಸುಮಾರು 160 ಜನರು ಪ್ರಾಣ ಕಳೆದುಕೊಂಡರು, ಸಾವಿರಾರು ಮನೆಗಳು ಬಿದ್ದು ಹೋದವು, ಹಾಗೆಯೇ ಸಾವಿರಾರು ಜಾನುವಾರುಗಳು ಸಾವನ್ನಪ್ಪಿದ್ದವು. ಈಗತಾನೆ ನಮ್ಮ ಶಾಸಕರು ಒಂದು ಪ್ರಶ್ನೆ ಕೇಳಿದರು. ಜುಲೈನಲ್ಲಿ ಆದಂತಹ ಪ್ರವಾಹದ ಬಗ್ಗೆ ಏನು ಪರಿಹಾರ ಕೊಟ್ಟಿದ್ದೀರಿ ಎಂದು ಪ್ರಶ್ನೆ ಕೇಳಿದ್ದಾರೆ. ಜುಲೈನಲ್ಲಿ ಆಗಿರತಕ್ಕಂತಹ ಪ್ರವಾಹದಿಂದ ಜನರಿಗೆ ತೊಂದರೆಯಾಗಿರುವುದಕ್ಕೆ ಇವತ್ತಿನವರೆಗೂ ಸಹ ಆ ಭಾಗಗಳಲ್ಲಿ ಸರಿಯಾಗಿ ಪರಿಹಾರ ಕೊಡಲು ಸಾಧ್ಯವಾಗಿಲ್ಲ. ಅದು ಆದಮೇಲೆ ಆಗಸ್ಟ್ 12ರವರೆಗೆ ಮಳೆ ಆಗಲಿಲ್ಲ. ಜೂನ್ ತಿಂಗಳಿನಿಂದ ಆಗಸ್ಟ್ 12ರವರೆಗೆ 20 ಜಿಲ್ಲೆಗಳ 86 ತಾಲ್ಲೂಕುಗಳಲ್ಲಿ ಮಳೆ ಆಗಲಿಲ್ಲ. ಒಟ್ಟು 86 ತಾಲ್ಲೂಕುಗಳಲ್ಲಿ ಮಳೆ ಆಗಲಿಲ್ಲವೆಂದು ಸರ್ಕಾರ ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿತು. ಮುಂಗಾರಿನಲ್ಲಿ ಸುಮಾರು 72 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಬೇಕಾದಂತಹ ಕಡೆಗಳಲ್ಲಿ ಸುಮಾರು 53–54 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ಮಾಡುವುದಕ್ಕೆ

ಸಾಧ್ಯವಾಯಿತು. ಸುಮಾರು 20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಳೆ ಇಲ್ಲದೇ ಬಿತ್ತನೆ ಮಾಡುವುದಕ್ಕೆ ಆಗಲಿಲ್ಲ. ಇನ್ನೂ ಕೆಲವು ಪ್ರದೇಶಗಳಲ್ಲಿ ಬಿತ್ತನೆ ಹಾಕಿ, ಬೆಳೆ ಬಂದು, ಪೈರು ಬಂದು ನಂತರ ಮಳೆ ಬಾರದೇ ಇದ್ದುದ್ದರಿಂದ ಬೆಳೆ ಹಾಳಾಯಿತು. ಸುಮಾರು 15 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿನ ಬೆಳೆ ನಾಶವಾಯಿತು. ಇದು ಬರಗಾಲದಿಂದ ಆದಂತಹ ಅನಾಹುತ. ರಾಜ್ಯ ಸರ್ಕಾರದವರು ಬರದಿಂದ ಸುಮಾರು 7 ನೂರು ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಹೇಳಿದರು. ಜುಲೈನಲ್ಲಿ ಆದಂತಹ ಪ್ರವಾಹದಿಂದ 500 ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಅಂದಾಜು ಮಾಡಿದರು. ಜುಲೈನಲ್ಲಿ ಆದಂತಹ ಪ್ರವಾಹದಿಂದ 500 ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ನಷ್ಟವಾಯಿತು ಎಂದು ಹೇಳಿದರು. 86 ತಾಲ್ಲೂಕುಗಳಲ್ಲಿ ಬರದಿಂದ ಸುಮಾರು 700 ಕೋಟಿ ರೂಪಾಯಿಗಳು ನಷ್ಟವಾಯಿತು ಎಂದು ಹೇಳಿದರು. ಆ ಎರಡು ಪ್ರಕೃತಿ ವಿಕೋಪಗಳಿಂದ ಸುಮಾರು 1200–1300 ಕೋಟಿ ರೂಪಾಯಿಗಳಷ್ಟು ನಮ್ಮ ರಾಜ್ಯದ ರೈತರಿಗೆ, ಕೂಲಿ ಕಾರ್ಮಿಕರಿಗೆ ಹಾಗೂ ಬೇರೆ ಬೇರೆ ಸಣ್ಣ ವೃತ್ತಿಗಳನ್ನು ಮಾಡತಕ್ಕಂತಹವರಿಗೆ ನಷ್ಟವಾಯಿತು.

ಅಧ್ಯಕ್ಷರು : ದಯವಿಟ್ಟು ಯಾರೂ ಮಾತನಾಡಬೇಡಿ. ಮಾನ್ಯ ಉಮೇಶ್ ಕತ್ತಿಯವರೇ ಮಾತನಾಡಬೇಡಿ. ಮಾನ್ಯ ಪ್ರಕಾಶ್ ಹುಕ್ಕೇರಿ ಯವರೇ ಈ ಕಡೆ ಬನ್ನಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದ ಹಾಗೂ ಅತ್ಯಂತ ಪ್ರಾಮುಖ್ಯವಾದ ವಿಚಾರವನ್ನು ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ಸರ್ಕಾರದ ಮಂತ್ರಿಗಳಿಗೆ ಇದರ ಬಗ್ಗೆ ಹೆಚ್ಚಿನ ಗಂಭೀರತೆ ಇಲ್ಲವೆಂದು ಇಲ್ಲಿ ನಿಮ್ಮನ್ನು ನೋಡಿದರೆ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಇಷ್ಟೊಂದು ಭೀಕರವಾದಂತಹ ಮಳೆ ಬಂದಿದೆ, ಪ್ರವಾಹ ಬಂದಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಕಡೆಗಳಲ್ಲೂ ಹೇಳುತ್ತಿದ್ದಾರೆ. ಕರ್ನಾಟಕದಲ್ಲಿ ಈ ಬಾರಿ ಜಲ ಪ್ರಳಯವಾಯಿತು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಅದು ನಿಜ ಕೂಡ ಆಗಿದೆ. ಜಲ ಪ್ರಳಯವಾಗಿರುವುದು ಸತ್ಯ. ಉತ್ತರ ಕರ್ನಾಟಕದ 15 ಜಿಲ್ಲೆಗಳಲ್ಲಿ ಬಹುಶಃ ನೂರು ವರ್ಷಗಳಿಂದ ನಾವು ಯಾರೂ ಕೂಡ ಕೇಳದೇ ಇದ್ದಂತಹ, ಕಾಣದೇ ಇದ್ದಂತಹ ಹಾಗೂ ಕಂಡರಿಯದಂತಹ ಪ್ರವಾಹವನ್ನು ಈ ವರ್ಷ ಸೆಪ್ಟೆಂಬರ್ 28, 29 ಹಾಗೂ 30 ಹಾಗೂ ಆಗಸ್ಟ್ 1,2,3 ಹಾಗೂ 4 ರಲ್ಲಿ ಆಗಿದೆ. ಈ ಒಂದು ವಾರದಲ್ಲಿ ಸೆಪ್ಟೆಂಬರ್ ಕೊನೆಯ ವಾರ ಮತ್ತು

ಅಕ್ಟೋಬರ್‌ನ ಮೊದಲನೇ ವಾರದ ನಾಲ್ಕನೇ ತಾರೀಖಿನವರೆಗೆ ಬಹುಶಃ ಇಡೀ ವರ್ಷದಲ್ಲಿ ಆಗಬೇಕಾದ ಮಳೆಯ 75 ಭಾಗದಷ್ಟು ಮಳೆ ಅಷ್ಟು ಕಡಿಮೆ ದಿನಗಳಲ್ಲಿ ಆಗಿ ಹೋಗಿದೆ. ಇಡೀ ವರ್ಷದಲ್ಲಿ ಮಳೆ ಬೀಳುವ ಪ್ರಮಾಣ ಏನಿದೆ ಅಷ್ಟೂ ಪ್ರಮಾಣದ ಮಳೆ ಆ ಒಂದು ವಾರದಲ್ಲಿ ಆಗಿದೆ.

(11-00 AM)

ಮಳೆ ಪ್ರಾರಂಭವಾದದ್ದು 28ನೇ ತಾರೀಖು. ಮಳೆ ಪ್ರಾರಂಭವಾಗಿ, ಮಳೆ ಜಾಸ್ತಿಯಾಗಲಿಕ್ಕೆ ಪ್ರಾರಂಭವಾದದ್ದು, 29, 30, 1 ಮತ್ತು 2ನೇ ತಾರೀಖಿಗೆ ಭಾರೀ ಪ್ರವಾಹ ಬಂದುಬಿಟ್ಟಿತು. ಆ ಪ್ರವಾಹ ಪರಿಸ್ಥಿತಿಯನ್ನು ನೋಡಿದರೆ, ಬಹಳ ಭೀಕರವಾಗಿ ಪ್ರವಾಹ ಬಂದಿದೆ. ಒಂದೊಂದು ಡ್ಯಾಂ ನಿಂದಲೂ ಮೂರುವರೆ ಲಕ್ಷ, ನಾಲ್ಕು ಲಕ್ಷ ಕ್ಯೂಸೆಕ್ಸ್‌ನಷ್ಟು ನೀರು ಹೊರಗಡೆ ಹೋಗಿದೆ. ಹವಾಮಾನ ಮನ್ಸೂಚನಾ ಇಲಾಖೆ ಇದೆ. ಕಳೆದ 2000 ರಿಂದ ಇವತ್ತಿನವರೆಗೆ, every alternative year ಬರಗಾಲ, ಪ್ರವಾಹ ಇರುತ್ತದೆ. 2007ರಲ್ಲೂ ಕೂಡ ಪ್ರವಾಹ ಬಂದಿತ್ತು. ಜುಲೈನಲ್ಲಿ ಪ್ರವಾಹ ಬಂದಿತ್ತು. ಇವತ್ತು ಏನು 15 ಜಿಲ್ಲೆಗಳಲ್ಲಿ ಪ್ರವಾಹ ಬಂದಿದೆ, ಇದೇ ಕೆಲವು ಜಿಲ್ಲೆಗಳಲ್ಲಿ 2007ರಲ್ಲಿ ಪ್ರವಾಹ ಬಂದಿದೆ. ಆದರೂ ಕೂಡ ರಾಜ್ಯ ಸರ್ಕಾರ ಇದರ ಬಗ್ಗೆ ಯಾವುದೇ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ Disaster Management Authority ಎಂದು ರಚನೆಯಾಗದೆ. ರಾಜ್ಯದಲ್ಲಿಯೂ ಇದೆ. ಕೇಂದ್ರದಲ್ಲಿಯೂ ಇದೆ. ಜಿಲ್ಲಾ ಮಟ್ಟಗಳಲ್ಲಿಯು ಕೂಡ ಇದೆ. ಪ್ರವಾಹ ಬಂದು ಇಷ್ಟೊಂದು ಅನಾಹುತಗಳು ಆಗಿದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು Disaster Management ನ ಕಮಿಟಿ ಮೀಟಿಂಗ್ ಅನ್ನು ಒಂದೂ ಮಾಡಿಲ್ಲ. ಇವತ್ತಿನವರೆಗೂ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಮಾಡಿದ್ದರೆ ಹೇಳಬೇಕು. Disaster Management Authority meeting ನೇರವಾಗಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿಯೇ ಇದೆ. ಆದರೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಮೀಟಿಂಗ್ ಮಾಡಿಲ್ಲ. ರಾಜ್ಯದ ಬಗ್ಗೆ, ರಾಜ್ಯದಲ್ಲಿ ಪ್ರವಾಹ ಬರತಕ್ಕದ್ದರ ಬಗ್ಗೆ, ಬರಗಾಲ ಬರತಕ್ಕದ್ದರ ಬಗ್ಗೆ ಯಾವ ತರಹ ಕಾಳಜಿ ಇದೆ ಎಂದು ಇವತ್ತು ಈ ರಾಜ್ಯದ ಜನ ಪ್ರಶ್ನೆ ಮಾಡುತ್ತಿದ್ದಾರೆ. ಈ ರಾಜ್ಯಕ್ಕೆ, ಈ ಸರ್ಕಾರಕ್ಕೆ ಕಾಳಜಿಯೇ ಇಲ್ಲ. ರೈತರ ಹೆಸರನ್ನು ಹೇಳುತ್ತಾರೆಯೇ ಹೊರತು, ರೈತರ ಬಗ್ಗೆ ಪ್ರಾಮಾಣಿಕವಾದಂಥ

ಕಾಳಜಿ ಇಲ್ಲ ಎನ್ನುವುದಕ್ಕೆ ಮಾನ್ಯ ಯಡಿಯೂರಪ್ಪನವರೆ, ಇವತ್ತು ಅನೇಕ ಘಟನೆಗಳಿಂದ, ನಿದರ್ಶನಗಳಿಂದ ಸಾಬೀತಾಗಿವೆ.

ಅಧ್ಯಕ್ಷರು : Details ಬೇಡ. Details ಆನಂತರ ಚರ್ಚೆ ಮಾಡೋಣ. Within the purview of Rule 60 ಇದು ಬರುತ್ತದೆ ಎನ್ನುವುದರ ಬಗ್ಗೆ ಮಾತನಾಡೋಣ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅದನ್ನೇ ಹೇಳುತ್ತಿರುವುದು, ಏಕೆಂದರೆ ನಾನು ಇದನ್ನೆಲ್ಲಾ ಹೇಳಿ ತಾನೇ ನಿಮಗೆ convince ಮಾಡಬೇಕಾಗಿರುವುದು. Otherwise, you are not going to be convinced. I would like to convince you. ಏಕೆಂದರೆ ನಿಯಮ 60ರ ಅಡಿಯಲ್ಲಿ ಚರ್ಚೆಗೆ ಅವರೂ ಒಪ್ಪಿಕೊಳ್ಳಬೇಕು, ನೀವೂ ನಮಗೆ ಅವಕಾಶ ಮಾಡಿಕೊಡಬೇಕು ಎನ್ನುವ ಕಾರಣಕ್ಕೋಸ್ಕರ ಹೇಳುತ್ತಿದ್ದೇನೆ. ಇವರು ಮೀಟಿಂಗ್ ಮಾಡಲೇ ಇಲ್ಲ. ರೈತರ ಬಗ್ಗೆ ಇವರ ಕಾಳಜಿ ಮೂರು ಕಾಸಿನಷ್ಟು ಇಲ್ಲವೆನ್ನುವುದು ಸಾಬೀತಾಗಿದೆ. ಇವರದ್ದು ಕೇವಲ ಮೂಗಿನ ಮೇಲೆ ತುಪ್ಪ ಹಚ್ಚತಕ್ಕಂಥ ಕೆಲಸವೇ ಹೊರತು, ಬರೀ ವಾಸನೆ ಕುಡಿಸುವ ಕೆಲಸವನ್ನು ಮಾಡಿದ್ದಾರೆಯೇ ಹೊರತು, ರೈತರಿಗೆ ತುಪ್ಪ ತಿನ್ನಿಸತಕ್ಕಂಥ ಕೆಲಸವನ್ನು ಇವರ ಕೈಯಲ್ಲಿ ಮಾಡುವುದಕ್ಕೆ ಆಗಲೇ ಇಲ್ಲ. ಇವರು ಯಾವ ಮುಂಜಾಗ್ರತಾ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಎರಡನೆಯದಾಗಿ, ಭಾರೀ ಮಳೆ, ಪ್ರವಾಹ ಬಂದಿದೆಯಲ್ಲಾ ಆಗ ಇಡೀ ಸರ್ಕಾರ ಎಲ್ಲಿತ್ತು? ಇಡೀ ಸರ್ಕಾರ ಸುತ್ತೂರಿನಲ್ಲಿ ಬೈಠಕ್‌ಗಾಗಿ ಹೋಗಿತ್ತು. ಮಾನ್ಯ ಮುಖ್ಯಮಂತ್ರಿಗಳು 2ನೇ ತಾರೀಖು ಬಂದು ಕಿರೀಟ ಹಾಕಿಸಿಕೊಂಡು ಆಮೇಲೆ ಹೋಗಿದ್ದೀರಿ. ಎಲ್ಲರೂ ಅಲ್ಲಿ ಯೋಗಾಸನಗಳು, ವ್ಯಾಯಾಮ ಮಾಡುತ್ತಿದ್ದರು. ಗುಜರಾತ್‌ನ ತರಹ ಕರ್ನಾಟಕವನ್ನು ಯಾವ ರೀತಿಯಾಗಿ ಮಾಡಬೇಕೆಂದು ಮಾನ್ಯ ಮೋದಿ ಅವರಿಂದ ಪಾಠ ಹೇಳಿಸಿಕೊಳ್ಳುತ್ತಿದ್ದರು. ಒಂದನೇ ತಾರೀಖಿನ ವರೆಗೂ ಕೂಡ, ಎರಡನೇ ತಾರೀಖಿನ ಬೆಳಗ್ಗೆಯವರೆಗೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಮೈಸೂರಿನಲ್ಲಿಯೇ ಇದ್ದರು. ಎರಡನೇ ತಾರೀಖು ಬೆಳಗ್ಗೆ ಬಿಟ್ಟು, ಮಾನ್ಯ ಮುಖ್ಯಮಂತ್ರಿಗಳು ಡಾಬಸ್ ಪೇಟೆಗೆ ಹೋಗಿದ್ದರು. ಅಲ್ಲಿ ಕೆ.ಎಂ.ಎಫ್‌ನವರು ಒಂದು ಸಭೆಯನ್ನು ಮಾಡಿದ್ದರು. ಕೆ.ಎಂ.ಎಫ್‌ನ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳಿಗಾಗಿ ಸನ್ಮಾನ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಇವರಿಗೆ 29ನೇ ತಾರೀಖಿನ ಪ್ರವಾಹದ ಬಗ್ಗೆ ತಿಳುವಳಿಕೆ

ಇದೆ, ಮಾಹಿತಿ ಇದೆ. 30, 1 ಮತ್ತು 2ನೇ ತಾರೀಖಿನ ಪ್ರವಾಹದ ಬಗ್ಗೆ ಮಾಹಿತಿ ಇದೆ. ಎಲ್ಲಾ ಮಾಹಿತಿ ಇದ್ದರೂ ಕೂಡ ಅಲ್ಲಿ ನೀವು ಯೋಗಾಸನ ಮಾಡಿಕೊಂಡು ಕುಳಿತುಕೊಂಡಿದ್ದೀರಲ್ಲಾ, ನಿಮಗೆ ಯಾವ ಕಾಳಜಿ ಇದೆ ಹೇಳು ನೋಡೋಣ? ಮುಂಚಿತವಾಗಿ ಪ್ರವಾಹದ ಬಗ್ಗೆ ಮಾಹಿತಿ ಗೊತ್ತಾದ ತಕ್ಷಣ ಸರ್ಕಾರ ಎಚ್ಚೆತ್ತುಕೊಂಡು ಮುಂಜಾಗ್ರತಾ ಕ್ರಮಗಳನ್ನು ಮಾಡಿದ್ದರೆ, ನನ್ನ ಪ್ರಕಾರ ಮಾನ್ಯ ಅಧ್ಯಕ್ಷರೆ, ಎಲ್ಲಾ ಅನಾಹುತಗಳನ್ನು ತಪ್ಪಿಸಲಿಕ್ಕೆ ನಮ್ಮ ಕೈಯಲ್ಲಿ ಯಾವುದೂ ಇರುವುದಿಲ್ಲ, ಸರ್ಕಾರದ ಕೈಯಲ್ಲೂ ಇರುವುದಿಲ್ಲ. ಆದರೆ ಕೆಲವು ಅನಾಹುತಗಳನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತಿತ್ತು. ಗುರುಗುಂದ್ ತಾಲ್ಲೂಕಿನ ಹಿರೇಮಾಗಿ ಎಂಬ ಊರಿಗೆ ಭೇಟಿ ಕೊಟ್ಟಿದ್ದೆವು. ಅಲ್ಲಿ ಐದು ಜನರು ದೋಣಿಯಲ್ಲಿ ಮುಳುಗಿ ಹೋಗಿದ್ದರು. ನಾನು ಸುಮ್ಮನೆ ಉದಾಹರಣೆಯನ್ನು ಹೇಳಿ, preliminary submission ಅಷ್ಟಕ್ಕೇ ಮಾಡುತ್ತೇನೆ. ಅಲ್ಲಿ ಒಂದು ದೋಣಿಯನ್ನು ಕೊಟ್ಟಿದ್ದಾರೆ. ಆ ದೋಣಿ, ಊರಿನಿಂದ ಇವರನ್ನು ಆಚೆಗೆ ಕರೆದುಕೊಂಡು ಬರಬೇಕಾಗಿತ್ತು. Capacity ಗಿಂತ ಹೆಚ್ಚು ಜನ ಕುಳಿತುಕೊಂಡಿದ್ದರು. ಅದು ಹಳೆ ದೋಣಿ ನಿಂತು ಹೋಗಿದೆ. ಆ ದೋಣಿ ಸರಿಯಾದ ರೀತಿಯಲ್ಲಿ ಹೊಸದಾಗಿದ್ದಿದ್ದರೆ, Condition ನಲ್ಲಿದ್ದಿದ್ದರೆ, ಅಲ್ಲಿ ದೊಡ್ಡ ದೋಣಿ ಹಾಕಿದ್ದರೆ, ಐದು ಜನರ ಸಾವನ್ನು ತಪ್ಪಿಸಬಹುದಾಗಿತ್ತು. ಈ ಘಟನೆ ಎರಡನೇ ತಾರೀಖಿನಂದು ನಡೆದಿದೆ. ಐದು ಜನರು ಪಾಪ, ಎಲ್ಲಾ ಬಡವರು, ಕೂಲಿ ಮಾಡುವವರು, ಪರಿಶಿಷ್ಟ ಜಾತಿ ಜನ. ಯಾರೇ ಆಗಿರಲಿ ಅವರು ಮನುಷ್ಯರು. ಇಷ್ಟೊಂದು ಮಾನವೀಯತೆಯ ಪ್ರಶ್ನೆ ಇರುವಾಗ, ಈ ಸರ್ಕಾರ ಅಮಾನವೀಯವಾಗಿ ನಡೆದುಕೊಂಡಿದೆಯಲ್ಲಾ ಎನ್ನುವುದು ಬಹಳ ದುಃಖದ ಸಂಗತಿ. ಅಲ್ಲಿಗೆ ಇವರು ಬರಲೇ ಇಲ್ಲ. ಒಂದನೇ ತಾರೀಖು ಮುಗಿದು, ಎರಡನೇ ತಾರೀಖು ಬೆಳಗ್ಗೆ ಮಾನ್ಯ ಮುಖ್ಯಮಂತ್ರಿಗಳು ಡಾಬಸ್ ಪೇಟೆಗೆ ಹೋಗಿ ಅಲ್ಲಿ ಕಿರೀಟ ಧಾರಣೆ ಮಾಡಿಸಿಕೊಂಡು, ಮೂರನೇ ತಾರೀಖು ಇವರು ಹೆಲಿಕಾಪ್ಟರ್ ತೆಗೆದುಕೊಂಡು ಎಲ್ಲಾ ಕಡೆ ವೀಕ್ಷಣೆ ಮಾಡುವುದಕ್ಕೋಸ್ಕರ ಹೋದರು. ಪ್ರವಾಹ ಬಂದು ಎಷ್ಟೊಂದು ಜನ ಸತ್ತಿದ್ದಾರೆ ಎನ್ನುವ ವರದಿಗಳು ಬರುತ್ತಿದ್ದರೂ ಕೂಡ, ಸುತ್ತೂರಿನಲ್ಲಿ ಒಳ್ಳೆಯ ಪುಷ್ಕಳವಾದಂಥ ಊಟ ಸಿಗುತ್ತಿತ್ತು ಎಂದು ಕಾಣಿಸುತ್ತದೆ ಆರಾಮವಾಗಿದ್ದರು. ರಾಜ್ಯದಲ್ಲಿ ಎಲ್ಲಾ ಸುಭಿಕ್ಷವಾಗಿದೆ ಎಂದು, ಇಡೀ ಜನರು ಕ್ಷೇಮವಾಗಿದ್ದರೂ ಕೂಡ, ಇಡೀ

ರಾಜ್ಯದಲ್ಲಿ ಸುಭಿಕ್ಷೆ ಇದ್ದರೂ ಕೂಡ ಆ ರೀತಿ ಇರುವುದಕ್ಕಾಗುವುದಿಲ್ಲ ಆ ರೀತಿ ಇದ್ದರು. ಇದನ್ನೇ ಜನರ ಬಗ್ಗೆ ಕಾಳಜಿ ಇಲ್ಲ ಎಂದು ಹೇಳುವುದು. ಇದನ್ನೇ ರೈತರ ಬಗ್ಗೆ ನಿಮಗೆ ಪ್ರಾಮಾಣಿಕವಾಗಿ ಚಿಂತನೆ ಇಲ್ಲವೆಂದು ಹೇಳುವುದು. ಇದು ಒಂದು. ಏಕೆಂದರೆ ನಾವು ವಿರೋಧ ಪಕ್ಷದಿಂದ 5 ತಂಡಗಳನ್ನು ಮಾಡಿಕೊಂಡು ಎಲ್ಲಾ ಕಡೆ ಹೋಗಿದ್ದೇವೆ. ಮೂರು ಮೂರು ಜಿಲ್ಲೆಗಳಿಗೆ ಒಂದೊಂದು ತಂಡವನ್ನು ಮಾಡಿಕೊಂಡು 15 ಜಿಲ್ಲೆಗಳಿಗೆ ಹೋಗಿ ಬಂದಿದ್ದೇವೆ. ಗದಗ್, ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ನಾನು ಇದ್ದ ತಂಡ ಹೋಗಿತ್ತು. ಬೇರೆ ಬೇರೆ ತಂಡಗಳು ಬೇರೆ ಬೇರೆ ಜಿಲ್ಲೆಗಳಿಗೆ ಹೋಗಿ ಹಾನಿಗೊಳಗಾಗಿರುವ ಜನರಿಗೆ ಸ್ವಾಂತನ ಹೇಳತಕ್ಕ ಕೆಲಸವನ್ನು ಮಾಡಿದ್ದಾರೆ. ಸರ್ಕಾರದವರು ಏನು ಮಾಡಿದ್ದಾರೆ, ಏನು ಮಾಡಿಲ್ಲ ಎನ್ನುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದ್ದಾರೆ. ವಿರೋಧ ಪಕ್ಷದಿಂದ ನಾವು ಏನೇನು ಪ್ರಯತ್ನ ಪಡಬಹುದು ಅವೆಲ್ಲಾ ಕೆಲಸವನ್ನು ಮಾಡಿದ್ದೇವೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಸರ್ಕಾರ ಇದರ ಬಗ್ಗೆ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿದ್ದರೆ, ಜನಪರಕಾಳಜಿ ಇದ್ದಿದ್ದರೆ, ರೈತರ ಬಗ್ಗೆ ಕಾಳಜಿ ಇದ್ದಿದ್ದರೆ ಇಷ್ಟೊಂದು ಅನಾಹುತವಾಗುತ್ತಿರಲಿಲ್ಲ ಎನ್ನುವುದು ನನ್ನ ಪ್ರಾಮಾಣಿಕ ಅನಿಸಿಕೆ. ಅನಂತರ 3ನೇ ತಾರೀಖು ಮಾನ್ಯ ಮುಖ್ಯಮಂತ್ರಿಯವರು ಹೋದರು. ಮಾನ್ಯ ಸೋನಿಯಾಗಾಂಧಿಯವರು ಹೋಗಿದ್ದರು, ನಾವು ಸಹ ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಅಲ್ಲಿಂದ ಡಿಫೆನ್ಸ್ ಮಿನಿಸ್ಟರ್‌ರ ವರಿಗೆಲ್ಲಾ ಮಾತನಾಡಿ ಅವರು ಬೋಟ್‌ಗಳು ಮತ್ತು ಮಿಲ್ಟ್ರಿಯವರನ್ನು ನೂರಾರು ಜನರ ರಕ್ಷಣೆ ಮಾಡುವುದಕ್ಕೋಸ್ಕರ ಅಲ್ಲಿಂದ ಕಳುಹಿಸಿಕೊಡುವ ಕೆಲಸವನ್ನೆಲ್ಲಾ ಮಾಡಿದ್ದಾರೆ. ನಾವೂ ನಮ್ಮ ಕೆಲಸವನ್ನು ಮಾಡಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರು ಸಬ್‌ಮಿಷನ್ ಮಾಡಬೇಕಾಗಿದ್ದರೆ Whether it can come under Rule 60. He should seek the permission of the Chair. ಆದ್ದರಿಂದ ಈಗಲೇ ಡೀಟೇಲ್ ಆಗಿ ಮಾತನಾಡಿದರೆ ಹೇಗೆ ಸರಿಯಾಗುತ್ತದೆ? ಆದ್ದರಿಂದ ದಯವಿಟ್ಟು ಅವರು ನಿಯಮ 60ರ ಅಡಿಯಲ್ಲಿ ಇದು ಹೇಗೆ ಬರುತ್ತದೆಂದು ಮೊದಲು ಸಬ್‌ಮಿಷನ್ ಮಾಡಲಿ. ನಾವು ಇದರ ಬಗ್ಗೆ ಚರ್ಚೆಗೆ ಅಡ್ಡಿ ಮಾಡುತ್ತಿಲ್ಲ. ಚರ್ಚೆಯಾಗಲಿ. ಆದರೆ, ಇದು ನಿಯಮ 60ರ ಅಡಿಯಲ್ಲಿ ಹೇಗೆ

ಬರುತ್ತದೆಂದು ಸಬ್‌ಮಿಷನ್ ಮಾಡಲಿ. ಸೋನಿಯಗಾಂಧಿಯವರದ್ದು ಮುಂತಾದ್ದೆಲ್ಲದರ ಬಗ್ಗೆ ಇವತ್ತು ತಂದರೆ main submission ಆಗುತ್ತದೆ. ಆದ್ದರಿಂದ I am requesting the Hon'ble Leader of Opposition to restrict himself to seek the permission.

SRI. SIDDARAMAIAH : I am doing the same thing. Whatever you suggested, ಅದನ್ನೇ ನಾನು ಮಾಡುತ್ತಿದ್ದೇನೆ. ನಿಮ್ಮ ಮನ ಒಲಿಸುವ ಸಲುವಾಗಿ ಸ್ವಲ್ಪ ಜಾಸ್ತಿ ಹೇಳುತ್ತಿದ್ದೇನೆ. I think ಇದರಲ್ಲಿ ನೀವು objection ತೆಗೆದುಕೊಳ್ಳುವುದೇನೂ ಇರುವುದಿಲ್ಲ. ಇಷ್ಟೊಂದು ಪ್ರವಾಹ ಆಗಿರುವಾಗ objection ಏನು ತೆಗೆದುಕೊಳ್ಳುತ್ತೀರಿ? ನಾನು ಬಹಳ ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ಇದು ನಿಯಮ 60ರ ಅಡಿಯಲ್ಲಿ ಹೇಗೆ ಬರುತ್ತದೆ ಎಂಬುದನ್ನು ಹೇಳಿ ಮುಗಿಸಿ.

ಶ್ರೀ ಸಿದ್ದರಾಮಯ್ಯ : ಇದು ಅತ್ಯಂತ ಸಾರ್ವಜನಿಕ ಮಹತ್ವದ ವಿಚಾರ. ಇದರ ಬಗ್ಗೆ ಏನಾದರು dispute ಇದೆಯೇ?

ಅಧ್ಯಕ್ಷರು : ಇಲ್ಲಾ. With in the purview of Rule 60 ಅದನ್ನು convince ಮಾಡಿ.

ಶ್ರೀ ಸಿದ್ದರಾಮಯ್ಯ : ಇದು ಅತ್ಯಂತ ಗಂಬೀರವಾದಂಥ ವಿಷಯ. ಬಹಳ ಮುಖ್ಯವಾದ ವಿಷಯ. ಸಾರ್ವಜನಿಕರಿಗೆ ತೊಂದರೆಯಾಗಿರುವ ವಿಷಯ. ಇತ್ತೀಚೆಗೆ ನಡೆದಿರುವಂಥ ಘಟನೆ. ಇದಕ್ಕಿಂತಾ ಇನ್ನೇನು ಹೇಳುತ್ತಾರೆ? I have fulfilled all the requirements of Rule 60. Alright ನೀವು ನನಗೆ permission ಕೊಟ್ಟುಬಿಡಿ, ನಿಯಮ 60ರಲ್ಲಿ ಚರ್ಚೆ ಮಾಡಲು ತೆಗೆದುಕೊಂಡಿದ್ದೇನೆಂದು ತಾವು ಹೇಳಿಬಿಟ್ಟರೆ ನಾನು ಇದರ ಬಗ್ಗೆ ಹೇಳುವುದನ್ನೇ ಬಿಟ್ಟುಬಿಡುತ್ತೇನೆ. I hope that you are convinced. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಮೇಲಾದರೂ ಮಾತನಾಡಲೇ ಬೇಕಲ್ಲಾ? ಆದ್ದರಿಂದ ಇದು ನಿಯಮ 60ರ ಅಡಿಯಲ್ಲಿ ಬರುತ್ತದೆ. ಇದು ಬಹಳ ಜರೂರಾದ ವಿಷಯ. ಸಾರ್ವಜನಿಕ ಮಹತ್ವದ್ದಾಗಿರತಕ್ಕದ್ದು, ರಾಜ್ಯದಲ್ಲಿ ಇತ್ತೀಚೆಗೆ ನಡೆದಿರತಕ್ಕ ಅತ್ಯಂತ ಭೀಕರವಾದ ಘಟನೆ. ನಿಯಮ 60 ರಲ್ಲಿರುವ ಎಲ್ಲಾ ವಿಷಯಗಳನ್ನು ಇದು fulfill ಮಾಡುತ್ತದೆ. ಆದ್ದರಿಂದ

ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡಲು ನಮಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಮಾನ್ಯ ಸದಸ್ಯರುಗಳು ಸಭೆಯ ಮುಂದೆ ವಿಚಾರವನ್ನು ತಂದಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ನಾನೂ ಸಹ ಸಬ್‌ಮಿಷನ್ ಮಾಡುತ್ತೇನೆ. ಅನಂತರ ಬೇಕಾದರೆ ಹೇಳಿ.

ಶ್ರೀ ಎಸ್. ಸುರೇಶ್‌ಕುಮಾರ್ : ನಾವು ಚರ್ಚೆ ಮಾಡುವುದಕ್ಕೆ ಅಡ್ಡಿ ಮಾಡುತ್ತಿಲ್ಲ. ಈಗ ಏನು ವಿರೋಧ ಪಕ್ಷದ ನಾಯಕರು ಸಬ್‌ಮಿಟ್ ಮಾಡಿದ್ದಾರೆ ಅದರ ಬಗ್ಗೆ ಮಾತ್ರ ಹೇಳಬಯಸುತ್ತೇನೆ. I will not take more than 4 to 5 minutes.

ಶ್ರೀ ಹೆಚ್.ಡಿ.ರೇವಣ್ಣ : ನಾನೂ ಸಬ್‌ಮಿಷನ್ ಮಾಡುತ್ತೇನೆ. ಅನಂತರ ಅವರು ಹೇಳಲಿ.

ಶ್ರೀ ಎಸ್. ಸುರೇಶ್ ಕುಮಾರ್ : ಇದರ ಅಡ್ಮಿಷನ್‌ಗೋಸ್ಕರ ಸಬ್‌ಮಿಷನ್ ಮಾಡಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ನಾನೂ ಅಡ್ಮಿಷನ್‌ಗೋಸ್ಕರವೇ ಹೇಳುತ್ತಿರುವುದು. ಇದರ ಬಗ್ಗೆ ನಾನೂ ಸಹ ಸೂಚನೆ ಕೊಟ್ಟಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಯಾವುದಾದರು ಒಂದನ್ನು ತೆಗೆದುಕೊಳ್ಳಲು ಮಾತ್ರ ಸಾಧ್ಯ. ಅವರದ್ದು 8–35ಕ್ಕೆ ಬಂದಿದೆ, ನಿಮ್ಮದು 8–45ಕ್ಕೆ ಬಂದಿದೆ.

ಅಧ್ಯಕ್ಷರು : ನಿಮ್ಮದು late ಆಗಿ ಬಂದಿದೆ, ಒಂದೇ ವಿಷಯದ ಬಗ್ಗೆ ಎರಡನ್ನೂ ತೆಗೆದುಕೊಳ್ಳಲು ಬರುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ತೆಗೆದುಕೊಳ್ಳಬಾರದು ಎಂದು ಏನಾದರು ಇದೆಯೇ?

ಅಧ್ಯಕ್ಷರು : ಎರಡನ್ನೂ ತೆಗೆದುಕೊಳ್ಳುವುದು ಅನಂತರ ವಿಚಾರ. ಈಗ ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬಹುದು. ತಮ್ಮದು late ಆಗಿ ಬಂದಿದೆ. ಎರಡನ್ನೂ ತೆಗೆದುಕೊಳ್ಳಲು ಹೇಗೆ ಬರುತ್ತದೆ?

ಶ್ರೀ ಹೆಚ್.ಡಿ.ರೇವಣ್ಣ : ಅವರೂ ಕೊಟ್ಟಿದ್ದಾರೆ ನಾನೂ ಕೊಟ್ಟಿದ್ದೇನೆ.

ಅಧ್ಯಕ್ಷರು : ಸರಿ. ಆದರೆ ನಿಯಮಾವಳಿ ಇದೆಯಲ್ಲಾ?

ಶ್ರೀ ಎಸ್. ಸುರೇಶ್ ಕುಮಾರ್ : ಚರ್ಚೆಗೆ ಅವಕಾಶವಿದೆ. ವಿರೋಧ ಪಕ್ಷದ ನಾಯಕರು ಏನು ಕೊಟ್ಟಿದ್ದಾರೋ ಅದರ ಬಗ್ಗೆ ಖಂಡಿತಾ ಚರ್ಚೆಗೆ ಅವಕಾಶವಿದೆ.

ಶ್ರೀ ಹೆಚ್.ಡಿ.ರೇವಣ್ಣ : ನಾನೂ ಅದೇ ವಿಚಾರವಾಗಿ ಕೊಟ್ಟಿರುವುದು.

ಅಧ್ಯಕ್ಷರು : ನಿಯಮಾವಳಿ ಪ್ರಕಾರ ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲು ಅವಕಾಶವಿದೆ. ಅವರದ್ದು 8–35ಕ್ಕೆ ಬಂದಿದೆ, ನಿಮ್ಮದು 8–45ಕ್ಕೆ ಬಂದಿದೆ. ಆದ್ದರಿಂದ ಒಂದಕ್ಕೆ ಮಾತ್ರ ಅವಕಾಶವಿದೆ. ಆದ್ದರಿಂದ ಎರಡನ್ನೂ ಹೇಗೆ ತೆಗೆದುಕೊಳ್ಳುವುದು? ತಾವು ಅನಂತರ ಮಾತನಾಡಿ. ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟಮೇಲೆ ತಾವು ಧಾರಾಳವಾಗಿ ಮಾತನಾಡಬಹುದು.

ಶ್ರೀ ಹೆಚ್.ಡಿ.ರೇವಣ್ಣ : ಚರ್ಚೆ ಅನಂತರ ಮಾಡಿ. ಆದರೆ, ನನಗೆ ಈಗ ಸಬ್‌ಮಿಷನ್‌ಗೆ ಅವಕಾಶ ಕೊಡಿ. ಅದಕ್ಕೆ ಅವಕಾಶ ಇದೆಯೋ ಇಲ್ಲವೋ ಹೇಳಿ.

ಅಧ್ಯಕ್ಷರು : ಚರ್ಚೆಗೆ ಅವಕಾಶ ಇದೆ. ಮೊದಲು ಸರ್ಕಾರ ಉತ್ತರ ಹೇಳಲಿ.

ಶ್ರೀ ಎಸ್. ಸುರೇಶ್ ಕುಮಾರ್ : ಈಗ ಏನು ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ವಿಚಾರವನ್ನು ತಂದಿದ್ದಾರೆ, ಇದು ಬಹಳ ಗಂಭೀರವಾದ ವಿಷಯ. ಈ ಶತಮಾನದಲ್ಲೇ ಕಂಡರಿಯದಂಥ ಒಂದು ಘಟನೆಯೆಂದು ನಾನು ಆಗಲೇ ಹೇಳಿದೆ. ಆದರೆ, ಅವರು ನಿಯಮ 60ರ ಪ್ರಕಾರ ಇದನ್ನು ತಂದಿದ್ದಾರೆ. ಇದು ನಿಯಮ 60ರ ಅಡಿಯಲ್ಲಿ ಬರುವುದಕ್ಕೆ, ನಿಯಮ 62 ರಲ್ಲಿ ಕೆಲವು restrictions ಇದೆ. ಅದರ ಅಡಿಯಲ್ಲಿ ಇವರು ತರಬೇಕು. ಅದರಲ್ಲಿ, ಮೊದಲನೆಯದು, not more than one matter shall be discussed on the same motion. ಒಂದು ಮೋಷನ್‌ನಲ್ಲಿ ಒಂದು issue ಬಗ್ಗೆ ಮಾತ್ರ ಚರ್ಚೆ ಮಾಡಬೇಕು. ಆದರೆ, ಇವರ ನೋಟಿಸ್‌ನಲ್ಲಿ ಕಳೆದ ಸೆಪ್ಟಂಬರ್ ಮತ್ತು ಅಕ್ಟೋಬರ್‌ನಲ್ಲಿ ಏನು ಪ್ರವಾಹವಾಯಿತು, ಬಹಳ ಹಾನಿಯಾಗಿದೆ ಎಂಬ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಇದನ್ನು ಮಾನ್ಯ ಲೋಕಾಯುಕ್ತರು, ಇದು ಈ ಶತಮಾನದ ಅತ್ಯಂತ ನೈಸರ್ಗಿಕ ಪ್ರಕೋಪದ ಹಾನಿ ಎಂದು ಹೇಳಿದ್ದಾರೆ.

ಹಾನಿಗೆ ಒಳಗಾದ ಲಕ್ಷಾಂತರ ಕುಟುಂಬಗಳ ಪರಿಹಾರ ಕಾರ್ಯಗಳು ಸಮರ್ಪಕವಾಗಿ ನಡೆಸುವಲ್ಲಿ ಸರ್ಕಾರ ವಿಫಲವಾಗಿದೆ. ಹಾಗೂ 86 ತಾಲ್ಲೂಕುಗಳ ಪರಿಸ್ಥಿತಿ ಎದುರಿಸುವಲ್ಲಿ ಮತ್ತು ಪರಿಹಾರ ನೀಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆಯೆಂದು ಹೇಳಿದ್ದಾರೆ. ಒಂದು ಪ್ರವಾಹ, ಇನ್ನೊಂದು ಬರ. ಯಾವುದಾದರು ಒಂದು issue ಅನ್ನು ಇಲ್ಲಿ ತೆಗೆದುಕೊಳ್ಳ ಬೇಕಾಗುತ್ತದೆ. ಎರಡನೆಯದ್ದು, the motion shall be restricted to a specific matter of recent occurrence. ಇದು ಆಗಿರುವುದು ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ. ಅವರು ಸದನವೇ ಸೇರಿರಲಿಲ್ಲವೆಂದು ಹೇಳಬಹುದು. ಆದರೆ, ಇದು recent occurrence ಅಲ್ಲ. ನಾವು ಈಗ ನವೆಂಬರ್ ಡಿಸೆಂಬರ್ ಕೊನೆಯ ಭಾಗಕ್ಕೆ ಬರುತ್ತಿದ್ದೇವೆ. ಮೂರನೆಯದ್ದು, ಅವರ ಈ ನೋಟೀಸನ್ನು ನೋಡಿದರೆ ಇದರಲ್ಲಿ ಯಾವುದೇ ಒಂದು ವಿಚಾರಕ್ಕೆ ಸೀಮಿತವಾಗಿಲ್ಲ. it is an ominous motion. ಬಹಳಷ್ಟು ವಿಚಾರಗಳನ್ನು ಒಳಗೊಂಡಿರುವ ಮೋಷನ್. ಆದ್ದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ. But not under Rule 60 but under Rule 69. ಸದನದ ಎಲ್ಲರೂ ಭಾಗವಹಿಸಲು ಅವಕಾಶ ಕೊಡಿ. ನಾವೂ ಕೂಡ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದೆ, ಸರ್ಕಾರ ಇದನ್ನು ಸಮರ್ಥವಾಗಿ ಹೇಗೆ ಎದುರಿಸಿದೆ ಎಂಬುದನ್ನು ಸದನಕ್ಕೆ ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ : ನಾನು ತಮಗೆ ನಿಯಮ 60ರ ಅಡಿಯಲ್ಲಿ ಏನೇನು ಹೇಳಲು ಸಾಧ್ಯವಾಗುತ್ತದೆ ಅವೆಲ್ಲವನ್ನೂ ಹೇಳಿದ್ದೇನೆ. ನನ್ನ ಪ್ರಕಾರ ನಿಯಮ 60ರಲ್ಲಿ ಏನೇನು requirements ಇದೆ ಅದನ್ನು fulfill ಮಾಡಿದ್ದೇವೆ ಎಂಬುದು ನನ್ನ ಸಬ್‌ಮಿಷನ್. ಬರಗಾಲದ ಬಗ್ಗೆ ಸಹ ಹೇಳಿದ್ದಾರೆಂದು ಅವರು ಹೇಳಿದರು. ಬರದ ಬಗ್ಗೆ ಕಳೆದ ಅಧಿವೇಶನದಲ್ಲಿ ಚರ್ಚೆಯಾಯಿತು. ಅನಂತರ ಸರ್ಕಾರದಿಂದ ಉತ್ತರ ಬಂತು. ಆದರೆ, ಇದುವರೆಗೆ ಎಲ್ಲಾದರೂ ಒಂದು ಕಡೆ ಪರಿಹಾರದ ಕೆಲಸ ನಡೆಯುತ್ತಿದೆಯೇ?

Sri. SIDDARAMAIAH : All right. Rule 60 ಅದಕ್ಕೆ detach ಮಾಡಿದರೂ ಕೂಡ what about the flood? Is it not a

recently occurred incident? It totally fulfills all the requirement of the rule...

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಪ್ರತಿ ಪಕ್ಷದ ನಾಯಕರೆ, ನಾನು ಹೇಳುವುದು ಏನೆಂದರೆ, This issue is a very serious issue...

Sri SIDDARAMAIAH : Please allow us to take up the discussion under Rule 60.

ಅಧ್ಯಕ್ಷರು : ಈ ದಿನ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರರು ನೀಡಿರುವ ನಿಲುವಳಿ ಸೂಚನೆ ಮೇಲೆ ಮಾನ್ಯ ವಿರೋಧ ಪಕ್ಷದವರು ಪ್ರಾರಂಭಿಕವಾಗಿ ಪ್ರಸ್ತಾವನೆಯನ್ನು ಮಂಡಿಸಿರುತ್ತಾರೆ. ಈ ಬಗ್ಗೆ ಸರ್ಕಾರದ ಕಡೆಯಿಂದ ಮಾನ್ಯ ಪಾರ್ಲಿಮೆಂಟ್ ಸಚಿವರು ಉತ್ತರವನ್ನು ನೀಡಿರುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಮಂಡಿಸಿರುವ ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ಸಾರ್ವಜನಿಕ ಮಹತ್ವದ ವಿಚಾರಗಳು ಒಳಗೊಂಡಿರುವುದರಿಂದ ಮತ್ತು ಯಾವುದೇ ವಿಚಾರಗಳು ಇತ್ತೀಚೆಗೆ ಘಟನೆಗಳಿಗೆ ಸಂಬಂಧಪಡದೇ ಇರುವುದರಿಂದ ಈ ನಿಲುವಳಿ ಸೂಚನೆಗೆ ಒಪ್ಪಿಗೆಯನ್ನು ನಿರಾಕರಿಸಿ, ಸದರಿ ವಿಷಯವನ್ನು ನಿಯಮ 69ರ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದೆ. ಈಗ ನಿಯಮ 69ರ ಅಡಿಯಲ್ಲಿ ಸದರಿ ವಿಷಯದ ಮೇಲಿನ ಚರ್ಚೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭಿಸಬಹುದು. ಈ ಚರ್ಚೆ ಪ್ರಾರಂಭವಾಗುವುದಕ್ಕಿಂತ ಮೊದಲು ಎಲ್ಲಾ ಸಚೇತಕರಲ್ಲಿ ನನ್ನದೊಂದು ವಿನಂತಿ ಇದೆ. ಯಾರ್ಯಾರು ಈ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆಂದು ಹೆಸರುಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಸದರಿ ಚರ್ಚೆಯಲ್ಲಿ ಪಾಲ್ಗೊಳ್ಳಲು ಅವಕಾಶ ಕೊಡುವ ಬಗ್ಗೆ ತಾವು ಸ್ವಲ್ಪ ಉದಾರವಾಗಿರಬೇಕು. ಬಹಳ ಜನ ಉತ್ತರ ಕರ್ನಾಟಕದಿಂದ ಬಂದಂತಹ ಸದಸ್ಯರಿದ್ದಾರೆ. ಅವರೆಲ್ಲರಿಗೂ ಸಹ ತಾವು ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ. 15 ಜಿಲ್ಲೆಗಳಲ್ಲಿ ನೆರೆ ಬಂದಿರುವುದರಿಂದ, ಆ ಭಾಗದವರೆಲ್ಲರಿಗೂ ತಾವು ಮಾತನಾಡಲು ಅವಕಾಶ ಕೊಟ್ಟರೆ, ಅವರೆಲ್ಲರಿಗೂ ಅವರವರ ಭಾಗದಲ್ಲಿ ನಿಖರವಾಗಿ ಮತ್ತು ವಾಸ್ತವಿಕವಾಗಿ ಏನೇನು ನಡೆದಿದೆ, ಪರಿಹಾರ ಕಾರ್ಯಗಳು ಯಾವ ರೀತಿ ನಡೆದಿವೆ ಮತ್ತು ಎಲ್ಲಿ ಪರಿಹಾರ ಕಾರ್ಯಗಳು ಆಗಿಲ್ಲ ಎಂಬುದನ್ನು ಸದನಕ್ಕೆ ತಿಳಿಸಲು ಅನುಕೂಲವಾಗುತ್ತದೆ.

ದಯವಿಟ್ಟು ಮಾನ್ಯ ಅಧ್ಯಕ್ಷರು ಎಲ್ಲರಿಗೂ ಕೂಡ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಮೂರೂ ಪಕ್ಷಗಳವರು ತಮ್ಮ ತಮ್ಮ ಪಕ್ಷದ ವತಿಯಿಂದ ಚರ್ಚೆಯಲ್ಲಿ ಯಾರ್ಯಾರು ಪಾಲ್ಗೊಳ್ಳುತ್ತಿದ್ದಾರೆ ಎಂಬ ಬಗ್ಗೆ ಹೆಸರುಗಳನ್ನು ನನಗೆ ಕೊಟ್ಟರೆ, ಅವರ ಹೆಸರುಗಳನ್ನು ಕರೆಯಲಿಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು ಮಾತನಾಡಬಯಸುವವರ ಹೆಸರುಗಳನ್ನು ನನಗೆ ಕೊಡಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

6. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆ :

ವಿಷಯ : ರಾಜ್ಯದಲ್ಲಿ ಕಳೆದ ಸೆಪ್ಟೆಂಬರ್–ಅಕ್ಟೋಬರ್ ತಿಂಗಳಿ . ನಲ್ಲಿ ಅಕಾಲಿಕ ಮಳೆ ಮತ್ತು ಪ್ರವಾಹ ಅನಾಹುತದಿಂದ ಉಂಟಾದ ತೊಂದರೆಯ ವಿಚಾರದಲ್ಲಿ ನೀಡಿರುವ ಸೂಚನೆಯ ಬಗ್ಗೆ :

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ತೀರ್ಪನ್ನು ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ. ತಾವು convert ಮಾಡಿ ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟಿದ್ದೀರಿ. ನಿಮ್ಮಲ್ಲಿ ನನ್ನದೊಂದು ಮನವಿ. ಇಂತಹ ಗಂಭೀರ ವಾದಂತಹ, ಪ್ರಾಮುಖ್ಯವಿರುವಂತಹ, ಸಾರ್ವಜನಿಕ ಮಹತ್ವವಿರುವಂತಹ ತುರ್ತಾದಂತಹ ವಿಚಾರವನ್ನು ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡಿದ್ದರೆ ಹೆಚ್ಚು ಮಹತ್ವ ಬರುತ್ತಿತ್ತು. ಈ ಸದನಕ್ಕೆ ಹೆಚ್ಚಿನ ಗಾಂಭೀರ್ಯ ಬರುತ್ತಿತ್ತು ಮತ್ತು ರಾಜ್ಯದ ಜನತೆಗೂ ಕೂಡ ಒಳ್ಳೆಯ message ಹೋಗುತ್ತಿತ್ತು. ಆ ಕಾರಣದಿಂದಾಗಿ ನಿಯಮ 60ರ ಅಡಿಯಲ್ಲೇ ಚರ್ಚೆಗೆ ತೆಗೆದುಕೊಂಡಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಆದರೆ ನೀವು ಅದನ್ನು ನಿಯಮ 69ಕ್ಕೆ convert ಮಾಡಿದ್ದೀರಿ.

ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರಸ್ತಾಪ ಮಾಡಿದಂತೆ ಕರ್ನಾಟಕದ ಇತಿಹಾಸದಲ್ಲಿ ಹಿಂದೆಂದೂ ಕೂಡ ಇಷ್ಟೊಂದು ಭಾರಿ ಪ್ರಮಾಣದ ಮಳೆ ಯಾವಾಗಲೂ ಬಿದ್ದಿರಲಿಲ್ಲ. ನಾವ್ಯಾರೂ 100 ವರ್ಷದವರಾಗಿಲ್ಲ. ಕಳೆದ 100